

# 'ಸಹಕಾರ'ದ ಮುಂದಿರುವ ಇಂದಿನ ಅನಿವಾರ್ಯತೆ

ರಾಧಾಕೃಷ್ಣ ಕೋಟೆ
ಅಂಚೆ: ಕಳಂಜ, ಸುಳ್ಯ ತಾಲೂಕು ದ.ಕ 574 212
9448503424

**1. ಸಹಕಾರಿ ಕ್ಷೇತ್ರವನ್ನು ಆದ್ಯತಾವಲಯನ್ನಾಗಿ ಘೋಷಿಸುವುದು.**

ದೇಶದ ಎಲ್ಲ ಪ್ರಗತಿಪರ ಕಾರ್ಯಕ್ರಮಗಳ ಅನುಷ್ಠಾನ ಸಹಕಾರಿ ವಲಯದಿಂದಲೇ ನಿರ್ವಹಿಸುವಂತಾಗಲು ಕ್ರಮವಿಡುವುದು ಅಗತ್ಯ. ಖಾಸಗೀಕರಣ, ಜಾಗತೀಕರಣಗಳ ಹಾಗೂ ಉದಾರೀಕರಣಗಳ ಆರ್ಥಿಕ ನೀತಿ ಈ ದೇಶದಲ್ಲಿ ಜಾರಿಯಾದ ನಂತರದಲ್ಲಿ ಸಹಕಾರ ಕ್ಷೇತ್ರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳದೆ ಶ್ರಮವಹಿಸಿ ತಲೆ ಎತ್ತಿ ನಿಂತು ಉತ್ತಮ ಸಾಧನೆಯನ್ನು ಮಾಡುತ್ತಿದೆ. ಈ ಕ್ಷೇತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಇದನ್ನು ಆದ್ಯತಾ ವಲಯವೆಂದು ಘೋಷಿಸುವುದು ಅಗತ್ಯ.

**2. ಸಹಕಾರ ಸಂಪೂರ್ಣ ಸ್ವಾಯತ್ತಾ ಕ್ಷೇತ್ರ.**

ಒಂದು ಶತಮಾನದ ಇತಿಹಾಸವಿರುವ ಈ ಕ್ಷೇತ್ರ ತನ್ನ ಬೆಳವಣಿಗೆಯಲ್ಲಿ ಅನೇಕ ಏರುಪೇರುಗಳನ್ನು ಕಂಡಿದೆ. ನಿರೀಕ್ಷಿಸಿದ ಸಾಧನೆಯನ್ನು ಮಾಡಲಾಗಲಿಲ್ಲ; ಇದಕ್ಕೆ ಸರಕಾರದ ಅತಿಯಾದ ಹಸ್ತಕ್ಷೇಪವೇ ಕಾರಣಗಳೆಂದು ವರದಿಗಳ ಆಧಾರದ ಮೇಲೆ ಸಹಕಾರಿಗಳ ಒತ್ತಾಯದ ಮೇರೆಗೆ ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗುವ 97 ನೇ ಸಂವಿಧಾನ ತಿದ್ದುಪಡಿ ಜಾರಿಗೊಳಿಸಿ ಸಹಕಾರಕ್ಕೆ ಸ್ವಾಯತ್ತತೆಯನ್ನು ನೀಡುವ ಹಾಗೂ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವುದನ್ನು ಸಾಂವಿಧಾನಿಕ ಹಕ್ಕನ್ನಾಗಿ ಮಾಡಿರುವುದು ಪ್ರಶಂಸನೀಯ. ಆದರೆ ಆ ಪ್ರಸ್ತಾವನೆ ಸಂಪೂರ್ಣ ಇನ್ನೂ ಜಾರಿಯಾಗಿಲ್ಲ. ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಈ ಕ್ಷೇತ್ರವನ್ನು ಸಂಪೂರ್ಣ ಸ್ವಾಯತ್ತಾ ಕ್ಷೇತ್ರವನ್ನಾಗಿಸಬೇಕು.

**3. ಸಹಕಾರಿ ಸಂಸ್ಥೆಗಳ ಸಂಖ್ಯಾಬಲವನ್ನು 6 ಲಕ್ಷ ದಿಂದ 10 ಲಕ್ಷಕ್ಕೆ ಹೆಚ್ಚಿಸುವುದು**

ಸಹಕಾರಿರಂಗ ದೇಶದ ಜನರ ಜೀವನಾಡಿಯಾಗಿ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ. ದೇಶದ ಜನಸಂಖ್ಯೆ ಹೆಚ್ಚಳವಾದಂತೆ ಕಾರ್ಯಚಟುವಟಿಕೆಗಳಲ್ಲೂ ವೈವಿಧ್ಯತೆಯನ್ನು ಕಾಣಲಾಗುತ್ತಿದೆ. ದೇಶದ ಜನರ ಎಲ್ಲ ವೈವಿಧ್ಯಮಯ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವಂತಾಗಬೇಕಾದರೆ ಈಗಿನ 6 ಲಕ್ಷ ಸಹಕಾರಿ ಸಂಸ್ಥೆಗಳಿಂದ ಇದು ಸಾಧ್ಯವಾಗುವುದಿಲ್ಲ. ಈ ಸಂಖ್ಯೆಯನ್ನು 10 ಲಕ್ಷಕ್ಕೆ ಹೆಚ್ಚಿಸಲು ಕ್ರಮವಿಡುವುದು ಅಗತ್ಯ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ ಪ್ರೋತ್ಸಾಹಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**4. ಆಧುನಿಕ ತಂತ್ರಜ್ಞಾನ ಅಳವಡಿಕೆಗೆ ಪ್ರಥಮ ಆದ್ಯತೆ**

ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಅಳವಡಿಕೆಯ ಅಗತ್ಯವಿದೆ. ದೇಶದ ಎಲ್ಲ ಸಹಕಾರ ಸಂಸ್ಥೆಗಳು ಆಧ್ಯತೆ ಮೇರೆಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಬೇಕು. ಇದಕ್ಕಾಗಿ ಎಲ್ಲ ಸಹಕಾರಿ ಸಂಸ್ಥೆಗಳಿಗೆ ವ್ಯಾಪಕ ಪ್ರಚಾರ; ಪ್ರೋತ್ಸಾಹ ಅಗತ್ಯ. ಈಗಾಗಲೇ ಸಾಕಷ್ಟು ಪ್ರಗತಿ ಈ ವಿಚಾರದಲ್ಲಿ ಆಗಿರುವುದು ಉಲ್ಲೇಖನೀಯ.

**5. ಸಹಕಾರ ಕ್ಷೇತ್ರವನ್ನು ತೆರಿಗೆ ಮುಕ್ತ ವಲಯವನ್ನಾಗಿ ಮಾರ್ಪಡಿಸುವುದು.**

ಸಹಕಾರಿ ಸಂಸ್ಥೆಗಳಲ್ಲಿ ಗ್ರಾಹಕ ವಸ್ತುಗಳ ಮಾರಾಟ ಹಾಗೂ ವ್ಯವಸಾಯೋತ್ಪನ್ನಗಳ ಮಾರಾಟ ವ್ಯವಸ್ಥೆಯಲ್ಲಿ ಸದಸ್ಯರಿಗೆ ಹೆಚ್ಚಿನ ಲಾಭವನ್ನು ಕೊಟ್ಟು ಸಂಸ್ಥೆಗೆ ಕನಿಷ್ಠ ಲಾಭವನ್ನು ಕೊಡುವ ವ್ಯವಸ್ಥೆಯಿರುವುದರಿಂದ ಸರಕು ಮತ್ತು ಸೇವಾ ತೆರಿಗೆಗಳನ್ನು ಪಾವತಿಸುವ ಸಂಧರ್ಭದಲ್ಲಿ ಸಂಸ್ಥೆಗಳಿಗೆ ಹೆಚ್ಚಿನ ಹೊರೆಯಾಗುತ್ತದೆ. ಸದಸ್ಯರು ಉತ್ಪಾದಿಸುವ ವಸ್ತುಗಳ ಮಾರಾಟಕ್ಕೆ ಪ್ರೋತ್ಸಾಹಿಸಲು ಸಾಧ್ಯವಾಗುತ್ತಿಲ್ಲ. ಸಹಕಾರ ಈ ದೇಶದ ಜನರ ಜೀವನ ಪದ್ಧತಿಯಾಗಿರುವುದರಿಂದ ಸಹಕಾರ ಕ್ಷೇತ್ರಕ್ಕೆ ಸರ್ವ ರೀತಿಯಲ್ಲಿ ವಿನಾಯಿತಿ ನೀಡುವುದು ಹಾಗೂ ಸಹಕಾರಿ ಕ್ಷೇತ್ರವನ್ನು ತೆರಿಗೆ ಮುಕ್ತ ವಲಯವೆಂದು ಸಾರುವುದು ತೀರಾ ಅವಶ್ಯ. ಪಟ್ಟಣ ಸಹಕಾರ ಬ್ಯಾಂಕುಗಳ ಲಾಭದಲ್ಲಿ ಆದಾಯ ತೆರಿಗೆ ಪಾವತಿಸುವ ಕ್ರಮದಿಂದ ಪಟ್ಟಣ ಸಹಕಾರಿ ಬ್ಯಾಂಕುಗಳು ಸಂಕಷ್ಟಕ್ಕೆ ಒಳಗಾಗಿವೆ. ಈ ಬ್ಯಾಂಕುಗಳ ದುಡಿಯುವ ಬಂಡವಾಳದ ಪ್ರಮಾಣ ಕುಂಠಿತವಾಗುತ್ತಿದ್ದು ಇವುಗಳ ಅಭಿವೃದ್ಧಿಗೆ ಈ ವ್ಯವಸ್ಥೆ ಮಾರಕವಾಗಿದೆ. ಆದ್ದರಿಂದ ಈ ವ್ಯವಸ್ಥೆಯನ್ನು ತೆಗೆದು ಸಹಕಾರಿ ಬ್ಯಾಂಕಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡಬೇಕಾಗಿದೆ. ಅಲ್ಲದೆ ಇಂದು ಆದಾಯ ತೆರಿಗೆಯನ್ನು ಇತರ ಸಹಕಾರಿ ಸಂಘಗಳಿಗೂ ಹೇರಲಾಗುತ್ತಿದ್ದು, ಇದನ್ನು ಸಂಪೂರ್ಣ ರದ್ದುಪಡಿಸುವ ಅವಶ್ಯಕತೆ ಇದೆ.

**6. ಸಹಕಾರ ರಂಗಕ್ಕೆ ಪ್ರತ್ಯೇಕ ನ್ಯಾಯಾಲಯಗಳ ವ್ಯವಸ್ಥೆ**

ಸಹಕಾರಿ ಕ್ಷೇತ್ರದ ವ್ಯಾಜ್ಯಗಳನ್ನು ತ್ವರಿತಗತಿಯಲ್ಲಿ ಬಗೆಹರಿಸುವ ದೃಷ್ಟಿಯಿಂದ ಇದಕ್ಕೆ ಪ್ರತ್ಯೇಕ ನ್ಯಾಯಾಲಯಗಳ ವ್ಯವಸ್ಥೆ ಅಗತ್ಯವಾಗಿರುತ್ತದೆ. ರಾಜ್ಯ ಸರಕಾರ ಈ ಕ್ಷೇತ್ರಕ್ಕೆ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.

**7. ಕರ್ನಾಟಕ ಸರಕಾರದ ವಿಧಾನಪರಿಷತ್‌ನಲ್ಲಿ ಸಹಕಾರ ಕ್ಷೇತ್ರಕ್ಕೆ ಸ್ಥಾನ**

ರಾಜ್ಯದ ಸಹಕಾರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯ ವಿಧಾನಮಂಡಲದ ಒಂದು ಭಾಗವಾಗಿರುವ ವಿಧಾನಪರಿಷತ್‌ನಲ್ಲಿ ಸಹಕಾರಕ್ಕೆ ಸ್ಥಾನವನ್ನು ಕಲ್ಪಿಸುವ ಅಗತ್ಯವಿದೆ. ಈ ದಿಸೆಯಲ್ಲಿ ಬಹಳಷ್ಟು ಪ್ರಯತ್ನವಾಗಬೇಕು.

**8. ನಿರಂತರ ಶಿಕ್ಷಣ, ತರಬೇತಿ**

ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅದರ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಶಿಕ್ಷಣ, ತರಬೇತಿ ವ್ಯವಸ್ಥೆಗಳು ವ್ಯಾಪಕವಾಗಿ ನಿರಂತರವಾಗಿ ನಡೆಯಬೇಕಿದೆ. ಶಿಕ್ಷಣ, ತರಬೇತಿಯ ಕೊರತೆಯಿಂದಾಗಿ ಸಹಕಾರದ ಅಭಿವೃದ್ಧಿಯು ನಿರೀಕ್ಷಿಸಿದ ಮಟ್ಟದಲ್ಲಿ ಆಗುತ್ತಿಲ್ಲ. ವ್ಯವಸ್ಥೆಯ ಬಗ್ಗೆ ಜ್ಞಾನ, ತಿಳುವಳಿಕೆ ಅಗತ್ಯವಾಗಿರುವುದರಿಂದ ಹಾಲಿ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಪ್ರತಿಯೊಂದು ಸಹಕಾರ ಸಂಸ್ಥೆಯು ಇದನ್ನು ಗಂಭೀರವಾಗಿ ಪರಿಗಣಿಸಲು ಕಾನೂನಿನ ಮೂಲಕ ಮಾರ್ಪಾಡುಗಳು ಆಗಬೇಕು.

**9. ದೇಶಾದ್ಯಂತ ಸಹಕಾರಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ**

ಸಹಕಾರ ರಂಗದ ಬಗ್ಗೆ ಯುವಜನರಿಗೆ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯವಾಗಿದೆ. ಸಹಕಾರದ ಬಗ್ಗೆ ವಿಶ್ವವಿದ್ಯಾನಿಲಯಗಳ ಹಂತದಲ್ಲಿ ಶಿಕ್ಷಣ ಪದ್ಧತಿ ಜಾರಿಯಾದರೆ ಇದರ ಬಗ್ಗೆ ವ್ಯಾಪಕ ಪ್ರಚಾರ ಹಾಗೂ ಅರಿವು ಮೂಡಿಸಲು ಸಾಧ್ಯವಾಗುತ್ತದೆ. ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಸಹಕಾರಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ಸಹಕಾರಿ ಶಿಕ್ಷಣ ಪ್ರಮುಖ ವಿಷಯವಾಗಿ ಹೊರಹೊಮ್ಮಬೇಕು.

ಈ ರೀತಿ ಹಲವಾರು ಮಾರ್ಪಾಡುಗಳು, ಸುಧಾರಣೆಗಳು ಆದಾಗ ಸಹಕಾರಿ ರಂಗ ಬಲಾಢ್ಯವಾಗಿ ಬೆಳೆದು ದೇಶದ ಜನರ ಜೀವನಾಡಿಯಾಗಿ ಸರ್ವಾಂಗೀಣ ಪ್ರಗತಿಗೆ ದಾರಿದೀಪವಾಗಲಿದೆ.